ಊ) ಇಂತಹ ಪ್ರಕರಣಗಳು ಮಂಡಳಿಯ ಅಥವಾ ಅಧ್ಯಕ್ಷರ ಗಮನಕ್ಕೆ ಬಂದಿರುವುದಿಲ್ಲ.

ಮೀಸಲಾತಿ ಪದ್ಧತಿ ಬಗ್ಗೆ.

3185 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರದಲ್ಲಿ ಮೀಸಲಾತಿಯನ್ನು ಕಡ್ಡಾಯವಾಗಿ ಜಾರಿಗೆ ತರಲು ನೇಮಿಸಿರುವ ಉನ್ನತ ಮಟ್ಟದ ಸಮಿತಿಯೂ ಇದ್ದು, ಇದು ಎಷ್ಟು ಬಾರಿ ಸಭೆ ಸೇರಿ ಮೀಸಲಾತಿ ಪದ್ಧತಿ ಕಡ್ಡಾಯವಾಗಿ ಎಲ್ಲಾ ಇಲಾಖೆಯಲ್ಲಿಯೂ ಜಾರಿಗೊಳಿಸಲಾಗಿದೆಯೇ, ಕಳೆದ ಮೂರು ವರ್ಷಗಳ ಬಡ್ತಿಗಳ ವಿವರಗಳನ್ನು ಒದಗಿಸುವುದು.*

ಆ) *ದೋಸ್ಸರ್ ಕಡ್ಡಾಯ ಜಾರಿಗೊಳಿಸಿದ ಇಲಾಖೆಗಳ ಮೇಲೆ ಕ್ರಮ ಕೈಗೊಂಡಿರುವಿರಾ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಸರ್ಕಾರದ ಮೀಸಲಾತಿ ಪಾಲನೆಯನ್ನು ಗಮನಿಸಲು ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯಿದ್ದು, ಅಗತ್ಯಕ್ಕೆ ತಕ್ಕಂತೆ ಈ ಸಮಿತಿಯನ್ನು ಆಗಿಂದಾಗ್ಗೆ ಪುನರ್ ರಚಿಸಲಾಗುತ್ತಿದೆ. ದಿನಾಂಕ 7-1-1991ರಂದು ಹೊಸ ಸಮಿತಿ ರಚಿತವಾಗಿದ್ದು, ಈ ಸಮಿತಿ ಈವರೆಗೆ ಸಭೆ ಸೇರಿರುವುದಿಲ್ಲ. ಎಲ್ಲಾ ಇಲಾಖೆಗಳೂ ಸರ್ಕಾರದ ಮೀಸಲಾತಿ ನೀತಿಯನ್ನು ಕಡ್ಡಾಯವಾಗಿ ಪಾಲಿಸಬೇಕು. ಸರ್ಕಾರದ ಎಲ್ಲಾ ಇಲಾಖೆಗಳಲ್ಲಿನ ವಿವಿಧ ಹುದ್ದೆಗಳಲ್ಲಿ ಕಳೆದ 3 ವರ್ಷಗಳಿಂದ ಮಾಡಲಾದ ಬಡ್ತಿ ವಿವರಗಳ ಮಾಹಿತಿ ಲಭ್ಯವಿಲ್ಲ.

ಆ) ಇಂತಹಾ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಸ್ವಾತಂತ್ರ್ಯ ಹೋರಾಟಗಾರರ ಮಾಸಿಕ ಪರಿಷ್ಕಾರದ ಬಗ್ಗೆ.

3251 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸ್ವಾತಂತ್ರ್ಯ ಹೋರಾಟಗಾರರ ಮಾಸಿಕ ಪರಿಹಾರವನ್ನು ಕೋರಿ ಬಂದಿರುವ ಅರ್ಜಿಗಳೆಷ್ಟು, (1-1-83 ರಿಂದ 31-12-90ರ ವರೆವಿಗೆ ಬಂದಿರುವ ಅರ್ಜಿಗಳನ್ನು ವರ್ಷಾನುಕ್ರಮದಲ್ಲಿ ನೀಡುವುದು)*

ಆ) *ಅರ್ಜಿದಾರರಿಂದ ವಿಳಂಬಾಲದಲ್ಲಿ ಅವಶ್ಯ ಮಾಹಿತಿ ಪಡೆಯಲು ಮಾರ್ಗದರ್ಶನ ಸೂಚನೆಗಳನ್ನು ಬಿಡುಗಡೆ ಮಾಡಲಾಗಿತ್ತೆ?*

ಇ) *ಈವರೆಗೆ ಇನ್ನೂ ಪರಿಹಾರ ದೊರಕದಿರುವುದಕ್ಕೆ ಕಾರಣವೇನು, ಎಂದಿನಿಂದ ಪರಿಹಾರ ನೀಡಲಾಗುವುದು?*

ಈ) *60 ವರ್ಷಕ್ಕೂ ಮೀರಿದ ಹೋರಾಟಗಾರರ ಅರ್ಜಿಗಳನ್ನು ಪರಿಗಣಿಸಿ ಅವರಿಗೆ ತ್ವರಿತ ಪರಿಹಾರ ನೀಡಲು ಸರ್ಕಾರವು ವಿಶೇಷ ಗಮನ ಹರಿಸುವುದೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ)

ವರ್ಷ	ಬಂದಿರುವ ಅರ್ಜಿಗಳು
1983	3204
1984	1453
1985	846